<u>ಸಾಕ್ಷಿಯನ್ನು ದಿನಾಂಕ 28.08.2025 ರ ಆದೇಶದ ಮೇರೆಗೆ ಪಾಟೀ ಸವಾಲಿಗೆ ಕರೆಸಿ ಸತ್ಯ ಪ್ರತಿಜ್ಞೆ ಮೇರೆಗೆ ಪ್ರಮಾಣೀಕರಿಸಲಾಯಿತು . ದಿ: 28.08.2025.</u>

<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಆರ್.ಎಸ್ ವಕೀಲರಿಂದ :</u>

**1 )** ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ. ನಾನು ಪೊಲೀಸರು ಮುಂದೆ ನೀಡಿದೆ ಎನ್ನಲಾದ ಹೇಳಿಕೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನಗೆ ವಿಚಾರಣೆಗೆ ಬರುವಂತೆ ನೊಟೀಸನ್ನು ನೀಡಿರಲಿಲ್ಲ. ನನ್ನ ಗಂಡನಿಗೆ ಡಿ.ಆರ್ ವಸತಿ ಗೃಹ ಮಂಜೂರು ಆದ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ. ಜಾಫರ್ ಇವರಿಗೆ ಯಾರು ಹೊಡೆದರು, ಯಾವಾಗ ಹೊಡೆದರು ಎಂದು ನಾನು ನೋಡಿಲ್ಲ. ಒಂದೊಂದು ಅಪಾರ್ಟಮೆಂಟ್ ನಲ್ಲಿ ಎಂಟು ಮನೆಗಳು ಇವೆ ಎಂದರೆ ಸಾಕ್ಷಿ ಆರು ಮನೆಗಳು ಇವೆ ಎಂದು ಉತ್ತರಿಸುತ್ತಾರೆ. ಗಲಾಟೆಯಾಗುತ್ತಿತ್ತು ಎನ್ನಲಾದ ಸಮಯದಲ್ಲಿ ನಾನು ಮನೆಯೊಳಗೆ ಹೋಗಿ ಯಾರ ಯಾರ ನಡುವೆ ಜಗಳ ಆಗುತ್ತಿದೆ ಎಂದು ನೋಡಿಲ್ಲ. ಮೃತ ಜಾಫರ್ ಸಾದಿಕ್ ಗೂ ಹಾಗು ಅವನ ಹೆಂಡತಿಯಾದ ನವೀನ್ ತಾಜ್ ಇವರ ನಡುವೆ ಪ್ರಕರಣಗಳು ನಡೆಯುತ್ತಿದ್ದರಿಂದ ಅವರಿಬ್ಬರ ನಡುವೆ ಸಂಬಂದ ಚೆನ್ನಾಗಿ ಇರಲಿಲ್ಲ ಎಂದರೆ ಸರ

**2)** ನಾನು ಪೊಲೀಸರಿಗೆ ನೀಡಿದೆ ಎನ್ನಲಾದ ಹೇಳಿಕೆಯನ್ನು ಯಾರು, ಯಾವಾಗ ಮತ್ತು ಎಲ್ಲಿ ಬರೆದುಕೊಂಡರು ಎಂದು ನನಗೆ ಗೊತ್ತಿಲ್ಲ. ಡಿ.ಎ.ಆರ್. ವಸತಿ ಗೃಹದ ಕಂಪೌಂಡ್ ಸುಮಾರು **06** ರಿಂದ **6.5** ಅಡಿ ಎತ್ತರ ಇದೆ ಎಂದರೆ ಸರಿ. ಪೊಲೀಸರು ಬಂದಾಗ ಆರೋಪಿತಳ ಮೇಲೆ ಅನುಮಾನ ಇದೆ ಎಂದು ನಾವು ಪೊಲೀಸರಿಗೆ ದೂರನ್ನು ನೀಡಿಲ್ಲ. ನಾನು ಪೊಲೀಸರಿಗೆ ನೀಡಿದೆ ಎನ್ನಲಾದ ಹೇಳಿಕೆಯಲ್ಲಿ ದಿನಾಂಕ **22.03.2023** ರಂದು ಯುಗಾದಿ ಹಬ್ಬ ಇರುವುದರಿಂದ ನಮ್ಮ ಮನೆಯಹತ್ತಿರ ಇರುವ ಬನ್ನಿ ಗಿಡದ ಗುಡಿಯಲ್ಲಿ ಬಲ್ಬ ಹೋಗಿದ್ದರಿಂದ ರಾತ್ರಿ **09.00** ಗಂಟೆಗೆ ನಮ್ಮ ಮನೆಯ ಪಕ್ಕದ ವಾಸಿಗಳಾದ ಹೇಮಲತಾ ಮತ್ತು ಪುಷ್ಪಲತಾ ಇವರು ಗಿಡದ ಬಳಿ ನಿಂತುಕೊಂಡು ಮಾತನಾಡುತ್ತಿದ್ದಾಗ ಅದೇ

ಸಮಯಕ್ಕೆ ನಾನು ಸಅಹ ನಮ್ಮ ಮನೆ ಮುಂದೆ ಇದ್ದಾಗ ಹನುಮಕ್ಕಳು ಕಸದ ಡಸ್ಟ ಬಿನ್ ತೆಗೆದುಕೊಂಡು ಬಂದಿದ್ದನ್ನು ನಾನು ಮತ್ತು ಹೇಮಲತಾ, ಪುಷ್ಪಲತಾ ಇವರು ನೋಡಿರುತ್ತೇವೆ, ಹಬ್ಬದ ದಿನ ರಾತ್ರಿ ವೇಳೆಯಲ್ಲಿ ಕಸ ಹಾಕಲು ಬಂದಿದ್ದಾಳೆ, ಪ್ರತಿದಿನ ಬೆಳಿಗ್ಗೆ ಕಸದ ವಾಹನವು ಬರುತ್ತಿದೆ ಈ ವೇಳೆಯಲ್ಲಿ ಯಾಕೇ ಕಸವನ್ನು ಹಾಕಲು ಬಂದಿದ್ದಾಳೆಂದು ಹನುಮಕ್ಕಳು ಬನ್ನಿ ಗಿಡದ ಬಳಿ ಇರುವ ಪೊಲೀಸ್ ವಸತಿ ಗೃಹದ ಕಂಪೌಂಡ್ ಗೋಡೆ ಆಚೆ ಇರುವ ಕಸದ ತಿಪ್ಪೆಯಲ್ಲಿ ಡಸ್ಟಬಿನ್‌ನಲ್ಲಿಟ್ಟುಕೊಂಡು ಬಂದಿದ್ದ ಕಸವನ್ನು ಒಗೆದಿರುತ್ತಾಳೆ. ನಮ್ಮನ್ನು ನೋಡಿ ಅಲ್ಲಿಂದ ಗಾಬರಿಯಾಗಿ ನಡೆದುಕೊಂಡು ಅವರ ಬಿಲ್ಡಿಂಗ್ ಕಡೆ ಹೋಡದಳು, ನಂತರ ಅವರು ಬಿಲ್ಡಿಂಗ್ ನಲ್ಲಿ ಡಸ್ಟಬಿನ್ ಇಟ್ಟು ಅಲ್ಲಿಂದ ಹೋರಗಡೆ ಹೋದಳು, ಸ್ವಲ್ಪ ಸಮಯದ ನಂತರ ಹನುಮಕ್ಕಳು ತನ್ನ ಮನೆಗೆ ಬಂದು ಲೈಟ್ ಆನ್ ಮಾಡಿದ್ದು ಇದನ್ನು ನಾವು ನೋಡಿರುತ್ತೇವೆ ಎಂದು ಹೇಳಿರುವುದಿಲ್ಲ. ಹೇಳಿಕೆಯ ಸದರಿ ಭಾಗವನ್ನು ನಿಡಿ-4 ಎಂದು ಗುರುತಿಸಲಾಯಿತು.

**3)** ನನ್ನ ಮುಖ್ಯ ವಿಚಾರಣೆಯಲ್ಲಿ ಖಂಡಿಕೆ **2** ರಲ್ಲಿ ಹೇಳಿದಂತೆ ದಿಃ **22-03-2023** ರಂದು ಅಂದರೆ ಉಗಾದಿ ಹಬ್ಬದ ದಿನದಂದು ರಾತ್ರಿ **8-00** ಗಂಟೆ ಸುಮಾರಿಗೆ ಆರೋಪಿ ಮನೆಯಲ್ಲಿ ಗಲಾಟೆಯಾಗಿದ್ದು ನಂತರ ನಾನು , ಹೇಮಲತಾ ಮತ್ತು ಪುಷ್ಪಾಲತಾ ಇವರು **3** ಜನ ಇರುವಾಗ ಆರೋಪಿಯೂ ಕಸದ ಡಬ್ಬಿಯನ್ನು ತೆಗೆದುಕೊಂಡು ಕತ್ತಲಲ್ಲಿ ಬನ್ನಿ ಗಿಡ ದ ಹತ್ತಿರ ಹೋಗಿ ಕಸವನ್ನು ಸದರಿ ಕಾಂಪೌಂಡ್ ಆಚೆಗೆ ಹಾಕಿ ಅಲ್ಲೆ ಆಕಡೆ ಈ ಕಡೆ ಗಾಬರಿಯಿಂದ ತಿರುಗಾಡುತ್ತಿದ್ದಳು, ಆಗ ನಾವು ಹಬ್ಬದ ದಿನ ಕಸ ಏಕೆ ಹೊರಗೆ ಹಾಕುತ್ತಾಳೆ ಎಂದು ಮತ್ತೆ ಏಕೆ ಈ ರೀತಿ ತಿರುಗಾಡುತ್ತಾಳೆ ಎಂದು ಮಾತನಾಡುಕೊಂಡೆವು, ರಾಃ **9-00** ಗಂಟೆ ಸುಮಾರಿಗೆ ಆರೋಪಿಯೂ ತನ್ನ ಮನೆಗೆ ಹೋಗಿ ಅಲ್ಲಿ ಕೊಟ್ರೆಶಣ್ಣ ನನ್ನ ಗಂಡನಿಗೆ ಯಾರೋ ಹೊಡೆದಿದ್ದಾರೆ ಎಂದು ಕೂಗಿದಳು ಎನ್ನುವ ವಿಷಯವನ್ನು ಪೊಲೀಸರಿಗೆ ನೀಡಿದೆ ಎನ್ನಲಾದ ಹೇಳಿಕೆಯಲ್ಲಿ ಹೇಳಿಲ್ಲ.

**4)** ಕಸದ ಡಬ್ಬಿ ಯಾವ ಬಣ್ಣದ್ದು, ಅದು ಹೇಗೆ ಇತ್ತು ಮತ್ತು ಯಾವ ಮಾದರಿಯದ್ದು ಅಗಿತ್ತು ಎಂದು ನನಗೆ ಗೊತ್ತಿಲ್ಲ. ಆ ದಿವಸ ಹನಮಕ್ಕ ಯಾವ ಬಣ್ಣದ ಬಟ್ಟೆದರಿಸಿದ್ದಳು ಮತ್ತು ಯಾವ ಮಾದರಿಯ ಬಟ್ಟೆಯಾಗಿತ್ತು ಎಂದು ಪೊಲೀಸರಿಗೆ ನೀಡಿದ ಎನ್ನಲಾದ ಹೇಳಿಕೆಯಲ್ಲಿ ಹೇಳಿಲ್ಲ ಮತ್ತು ಪೊಲೀಸರು ನನಗೆ ಅವುಗಳನ್ನು ತೋರಿಸಿಲ್ಲ. ಡಸ್ಟಬಿನ್ ಹಾಕಿದ ಸ್ಥಳದಲ್ಲಿ ನಾನು ಹೋಗಿ ಏನನ್ನು ಹಾಕಿದ್ದರು ಎಂದು ನೋಡಿಲ್ಲ. ಮೃತ ವ್ಯಕ್ತಿಯನ್ನು ಯಾರು ಆಸ್ಪತ್ರೆಗೆ ಕರೆದುಕೊಂಡು ಹೋದರು, ಹೇಗೆ ಮೇಲಿಂದ ಕೆಳಗೆ ಕರೆದುಕೊಂಡು ಹೋದರು ಮತ್ತು ಯಾರು ಕರೆದುಕೊಂಡು ಹೋದರು ಎಂದು ನನಗೆ ಗೊತ್ತಿಲ್ಲ. ನಾನು ಪಿಂಜಾರ್ ಸಮುದಾಯದವಳು. ಮೃತ ಜಾಪರ್ ಇವನು ಕೂಡ ಪಿಂಜಾರ್ ಸಮುದಾಯದವನು ಎಂದರೆ ಸರಿ. ನಾನು ಡಿ.ಎ.ಆರಿ ವಸತಿಗೃಹದಲ್ಲಿ ವಾಸ ಮಾಡುತ್ತಿಲ್ಲ ಆದರು ಮೃತ ಜಾಫರ ನಮ್ಮ ಸಂಬಂಧಿಕನಾದ ಕಾರಣ ದೂರುದಾರಳ ಮಾತು ಕೇಳಿಕೊಂಡು ನಾನು ಡಿ.ಎ.ಆರ್ ವಸತಿ ಗೃಹದಲ್ಲಿ ವಾಸ ಮಾಡುತ್ತಿದ್ದೆ ಮತ್ತು ಪ್ರಶ್ನಿಶ ಘಟನೆ ಕೇಳಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .)

ಓ . ಹೇ. ಕೆ . ಸರಿ ಇದೆ .

**C/C, 2** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ .